

## ಸಮ್ಮೋಹನದಿಂದ ಅಪರಾಧ!

ಸಮ್ಮೋಹನಕ್ಕೆ ಒಳಗಾದ ವ್ಯಕ್ತಿಯಲ್ಲಿ ಕೈಯಲ್ಲಿ ಸಮ್ಮೋಹಕ ಅಪರಾಧ ಮಾಡಿಸಲು ಸಾಧ್ಯವೇ?

ವ್ಯಕ್ತಿಯನ್ನು ಹಿಪ್ನೋಟೈಸ್ ಮಾಡಿ, ಆತ/ಆಕೆಯಿಂದ ಕೊಲೆ, ದರೋಡೆ, ಅತ್ಯಾಚಾರಗಳನ್ನು ಮಾಡಿಸಬಹುದೇ? ಸಾಮಾನ್ಯವಾಗಿ ಸಾಧ್ಯವಿಲ್ಲ. ಸಮ್ಮೋಹನ ಸ್ಥಿತಿಯಲ್ಲಿರುವ ವ್ಯಕ್ತಿಯ ಮನಸ್ಸು, ಸಮ್ಮೋಹನ ಆಜ್ಞೆಯಂತೆ ನಡೆದರೂ, ಅವನ/ ಅವಳ ಮನಸ್ಸು ತನ್ನ ವಿವೇಚನೆಯನ್ನು ಉಳಿಸಿಕೊಂಡಿರುತ್ತದೆ. ಆತ್ಮ ಸಾಕ್ಷಿ ಕೆಲಸ ಮಾಡುತ್ತದೆ, ಆದರೆ ಅಪರಾಧ ಮಾಡಲು ಸಾಧ್ಯವಿಲ್ಲ. ಆದರೆ ಸಮ್ಮೋಹನ ಸ್ಥಿತಿಯಲ್ಲಿ ಲಾಭಕರವಾದ ಲಘು ಅಪರಾಧ ಮಾಡಬಹುದು. ಸುಳ್ಳು ಹೇಳಬಹುದು. ಸಣ್ಣಪುಟ್ಟ ಕಳ್ಳತನ ಮಾಡಬಹುದು. ಮುಖ್ಯ ದಸ್ತಾವೇಜನ್ನು ನಾಶ ಮಾಡಬಹುದು. ಪುರುಷ, ಹುಡುಗಿಗೆ ಮುತ್ತು ಕೊಡಬಹುದು, ಐ ಲವ್ ಯೂ ಎನ್ನಬಹುದು.

ಸಮ್ಮೋಹಕನು ಸ್ತ್ರೀಯೊಬ್ಬಳನ್ನು ಸಮ್ಮೋಹನಕ್ಕೆ ಒಳಪಡಿಸಿ ಲೈಂಗಿಕ ಅಪಚಾರ ಮಾಡಿದ ಉದಾಹರಣೆಗಳಿವೆ. ಕೆಲವರು ಪ್ರತಿಭಟಿಸಿ ತಮ್ಮ ಶೀಲವನ್ನು ಕಾಪಾಡಿಕೊಳ್ಳಲೂಬಹುದು.

ಭಾವನೆ–ವರ್ತನೆಗಳನ್ನು ಬದಲಿಸಬಹುದು ಎಂದು ಮನಃಶಾಸ್ತ್ರಜ್ಞರು ನಂಬಿದರು. ಈಗಲೂ ಅನೇಕ ಜನ ಈ ನಂಬಿಕೆಯನ್ನು ವ್ಯಕ್ತಪಡಿಸುತ್ತಾರೆ. ಇದು ಎಷ್ಟರಮಟ್ಟಿಗೆ ನಿಜ?

ಹಿಪ್ನೋಸಿಸ್‌ನಲ್ಲಿ ವ್ಯಕ್ತಿ ದೈಹಿಕವಾಗಿ, ಮಾನಸಿಕವಾಗಿ ವಿರಮಿಸುತ್ತಾನೆ. ಆತಂಕ, ಭಯ, ಖಿನ್ನತೆ, ಕೋಪಗಳು ಕಡಿಮೆಯಾಗಬಹುದು. ಮಾನಸಿಕ ಒತ್ತಡ ತಗ್ಗಬಹುದು. ನೋವಿನ ಅನುಭವವೂ ತಗ್ಗಬಹುದು. ಹಿಪ್ನೋಸಿಸ್‌ನಲ್ಲಿ ವ್ಯಕ್ತಿ ತನ್ನ ಮನಸ್ಸಿನ ಅದುಮಿಟ್ಟ, ಬಚ್ಚಿಟ್ಟ ತೊಳಲಾಟಗಳು, ಆಸೆ–ಬಯಕೆ, ಅಪಮಾನಗಳನ್ನು ಹೊರಕ್ಕೆ ಹಾಕಬಲ್ಲ. (ಆದರೆ ಹಾಕಲೇಬೇಕೆಂಬ ನಿಯಮವೂ ಇಲ್ಲ ಎಂಬುದನ್ನು ಗಮನಿಸಿ) ತಪ್ಪಿತಸ್ಥ, ಪಾಪ ಪ್ರಜ್ಞೆಯಿಂದ ಹೊರ ಬರಬಲ್ಲನಾದ್ದರಿಂದ ಅನೇಕ ಮಾನಸಿಕ ಜನ್ಯ, ಒತ್ತಡ ಜನ್ಯ ರೋಗ ಲಕ್ಷಣಗಳು, ಉನ್ಮಾದದ (ಹಿಸ್ಟಿರಿಯಾ) ಲಕ್ಷಣಗಳು ಕಡಿಮೆಯಾಗುತ್ತವೆ. ಆದ್ದರಿಂದ ಯಾರು ಹಿಪ್ನೋಸಿಸ್‌ಗೆ ಒಳಗಾಗಬಲ್ಲರೋ. ಅವರಿಗೆ ಮನೋಚಿಕಿತ್ಸೆಯ ಅಂಗವಾಗಿ ಹಿಪ್ನೋಸಿಸ್ ಚಿಕಿತ್ಸೆಯನ್ನು ನೀಡಬಹುದೆಂದು ಅಮೆರಿಕೆಯ ಸೈಕಲಾಜಿಕಲ್ ಸೊಸೈಟಿಯು ಶಿಫಾರಸು ಮಾಡಿದೆ. ಹಿಪ್ನೋಸಿಸ್‌ಗೆ ಒಳಗಾಗದವರಲ್ಲಿ ಈ ಚಿಕಿತ್ಸೆಯಿಂದ ಯಾವ ಪ್ರಯೋಜನವೂ ಇಲ್ಲ. ಆದ್ದರಿದ ಆಯ್ದ ವ್ಯಕ್ತಿಗಳಿಗೆ ಹಿಪ್ನಾಟಿಕ್ ಚಿಕಿತ್ಸೆಯನ್ನು ಕೊಟ್ಟು ನೆರವಾಗಲು ತರಬೇತಿ ಹೊಂದಿದ ಚಿಕಿತ್ಸಕರು ಅತ್ಯಗತ್ಯ. ಹವ್ಯಾಸಿ ಹಿಪ್ನೋಸಿಸ್ ಮಾಡುವ ವ್ಯಕ್ತಿಗಳು ಈ ಚಿಕಿತ್ಸೆ ನಡೆಸುವುದು ಕ್ಷೇಮವಲ್ಲ.

ಹಲ್ಲು ಕೀಳಲು, ಚಿಕ್ಕ ಶಸ್ತ್ರ ಚಿಕಿತ್ಸೆ ಮಾಡಲು ಲೋಕಲ್ ಅನೆಸ್ತೀಸಿಯಾ ಬದಲು ಹಿಪ್ನೋಸಿಸ್ ಅನ್ನು  ಬಳಸಬಹುದು. ಸಿಗರೇಟ್, ಮದ್ಯಪಾನ, ಮಾದಕವಸ್ತು ಸೇವನೆಯ ಅಭ್ಯಾಸ ಬಿಡಿಸಲೂ ಉಪಯೋಗಿಸಬಹುದು. ಆದರೆ ಗುಣ ಗ್ಯಾರಂಟಿ ಇಲ್ಲ.

ಆತಂಕ, ಖಿನ್ನತೆ, ಉನ್ಮಾದ, ಮನೋದೈಹಿಕ ರೋಗಗಳಾದ ಮೈಗ್ರೇನ್, ಟೆನ್ಶನ್, ತಲೆನೋವು ಇರಿಟಬಲ್ ಬೊವೆಲ್ ಸಿಂಡ್ರೋಮ್ (IBS), ಆಘಾತದ ನಂತರದ ಮನೋರೋಗ (PTSD), ಆಹಾರಸೇವನೆ– ನಿದ್ರಾ ತೊಂದರೆಗಳಲ್ಲಿ ಹಿಪ್ನಾಟಿಕ್ ಥೆರಪಿಯನ್ನು ಬಳಸಲಾಗಿದೆ. ಆದರೆ ಗುಣ ನಿಶ್ಚಿತವೇ ಎಂಬುದು ಆ ವ್ಯಕ್ತಿಗಳ ಮೇಲೆ ನಿರ್ಧಾರವಾಗುತ್ತದೆ. ಎಲ್ಲರಲ್ಲೂ ಹಿಪ್ನಾಟಿಕ್ ಚಿಕಿತ್ಸೆ ಪರಿಣಾಮಕಾರಿ ಎಂದು ಹೇಳಲು ಬರುವುದಿಲ್ಲ.

### ಹಿಪ್ನೋಸಿಸ್ ಮೂಲಕ ಪುನರ್ಜನ್ಮ ಚಿಕಿತ್ಸೆ: ಏನಿದು?

‘ಈ ಜನ್ಮದಲ್ಲಿ ನಿಮ್ಮ ಆರೋಗ್ಯ, ನೋವು, ಸೋಲು, ನಿರಾಶೆಗಳಂತಹ ಸಮಸ್ಯೆಗಳ ಮೂಲ ನಿಮ್ಮ ಹಿಂದಿನ ಜನ್ಮಗಳಲ್ಲಿರುತ್ತದೆ. ಕರ್ಮ ಸಿದ್ಧಾಂತದ ಪ್ರಕಾರ ಮಾಡಿದ್ದುಣ್ಣೋ ಮಹರಾಯ.